ಪ್ರಯಾಸದಿಂದ ಚಲಿಸುತ್ತಿತ್ತು, ಸಂಜೆಗಾಲ ವಿಚಿತ್ರ ಚಿಂತೆಯನ್ನು ಒಳಗಡೆ ಬೀಸಾಡುತ್ತಿತ್ತು. ವೀರೇಂದ್ರ ಕುಲಕರ್ಣಿ ಕ್ರೋಧದಿಂದ ಹತ್ತಿ ಗೂಡೆಯನ್ನು ಒದ್ದುಕೊಂಡು ಬಂದ ಸಂಜೆಯೇ ಇಂಥ ಒಂದು ತೀರ್ಮಾನಕ್ಕೆ ಬಂದಿದ್ದು, ಎಲ್ಲರೂ ಸಹಮತ ಸೂಚಿಸಿದ್ದು. ಎಲ್ಲರಿಗಿಂತ ಮುಂಚೆ ಭೀಮವ್ವಳೇ ಆ ಕಥೆಗೆ ಪುರಾವೆ ಮತ್ತು ಪುಷ್ಟಿ ಒದಗಿಸಿದ್ದು, ಇನ್ನುಳಿದವರೆಲ್ಲರೂ ಅವಳನ್ನು ಹಿಂಬಾಲಿಸಿದ್ದರು. ದಿನದ ಕೂಲಿಯಲ್ಲಿ ನೂರು ರೂಪಾಯಿ ಹೆಚ್ಚಿಸಿದ ವೀರೇಂದ್ರ ಕುಲಕರ್ಣಿಯ ಮೇಲೆ ಎಲ್ಲರಿಗೂ ವಿಶೇಷವಾದ ಗೌರವ ಮೂಡಿತು. ಆನಂತರವೇ ಅವನು ತನ್ನ ವ್ಯಾಪಾರೀಕರಣದ ಕರಾಮತ್ತು ತೋರಿದ್ದು, ಬಂಡವಾಳಶಾಹಿಗಳ ಕ್ರೌರ್ಯ ಕಕ್ಕಿದ್ದು. ಶಿಕ್ಷಣ ಇಲ್ಲದ ಈ ಹೆಣ್ಣುಗಳು ಈ ಕೆಲಸವನ್ನು ತೊರೆದರೆ ಹೈದರಾಬಾದ್ ಅಥವಾ ಮುಂಬೈ ಕಡೆಗೆ ವಲಸೆ ಹೋಗಿ ವೇಶ್ಯಾವಾಟಿಕೆಗೆ ಇಳಿಯಬೇಕು. ಆ ರೌರವಕ್ಕಿಂತ, ಕಷ್ಟವಾದರೂ ಊರ ಮಗ್ಗುಲಿನ ಈ ಕಸುಬೇ ಇವರಿಗೆ ಪ್ರಿಯವಾಗಿ ಕಂಡಿತ್ತಾದ್ದರಿಂದ ತಮ್ಮ ತಮ್ಮ ಮನೆಗಳಲ್ಲಿ ವಿಷಯ ತಿಳಿಸಿ ಅವರನ್ನೂ ಒಮ್ಮತಕ್ಕೆ ಬರುವಂತೆ ಮಾಡಿದ್ದರು. ಕೆಲವರು ವಿರೋಧ ವ್ಯಕ್ತಪಡಿಸಿದ್ದರೂ ವಿಧಿಯಿಲ್ಲದೆ ಅಸಹಾಯಕತೆಯಿಂದ ಒಪ್ಪಿಕೊಳ್ಳಲೇಬೇಕಾಯಿತು. ಇನ್ನು ಮಹಾಂತೇಶ, 'ಇನ್ನೇನ್ ಬೇಕು, ಒಪ್ಪ ಹೋಗು' ಎಂದು ಜೊಲ್ಲು ಸುರಿಸುತ್ತಾ ಭೀಮವ್ವ ಮುಂದಿರಿಸಿದ ಹಣದ ನೋಟುಗಳನ್ನು ಎತ್ತಿಕೊಂಡು ಇನ್ನೊಂದು ಮಾತನ್ನು ಮರೆಯದೇ ಆಡಿದ್ದ, 'ಯಾವನ್ನೋ ಹೋಗ್ಲಿ ಬಿಡೂ...' ಎಂದ. ಈ ಉವಾಚ ಭೀಮವ್ವಳ ಸ್ಥೈರ್ಯವನ್ನು ಮತ್ತಷ್ಟು ಇಮ್ಮಡಿಗೊಳಿಸಿತ್ತು. ಕಿಬ್ಬೊಟ್ಟೆ ಮೇಲೆ ಗಟ್ಟಿಯಾಗಿ ಕೈ ಮಡಗಿಕೊಂಡಳು, ವ್ಯಾನ್ ಹಳ್ಳದೊಳಗೆ ಇಳಿಯಿತು, ನೋವಿನಿಂದ ಚೀರಿದಳು, ಉಳಿದೆಲ್ಲರೂ ಪಾಲುದಾರರಾದರು. ವೀರೇಂದ್ರ ಕುಲಕರ್ಣಿಗೆ ಯಾರೊಬ್ಬರು ಎದುರು ಮಾತಾಡಲಿಲ್ಲ, ಹಾಗೆ ಯಾರಾದರೂ ಚಕಾರ ಎತ್ತಬಹುದೆನ್ನುವ ಅನುಮಾನ ಇತ್ತು, ಅದು ಹುಸಿಯಾಗಿತ್ತು. ಈ ಹಿಂದೆ ಯೋಜಿಸಿದಂತೆ ಒಬ್ಬೊಬ್ಬರಾಗಿ ಮುಖಕ್ಕೆ ಗವುಸು ಸುತ್ತಿಕೊಂಡು ಕೆಳಗಿಳಿಯತೊಡಗಿದರು, ಅಲ್ಲಿ ಹಾಗೆ ನಿಲ್ಲುವಂತಿರಲಿಲ್ಲ. ಕುಲಕರ್ಣಿಯ ಸಹಾಯಕ ಅವರನ್ನು ಹಿರಿಯ ವೈದ್ಯಾಧಿಕಾರಿ ಸೂಚಿಸಿದ ಕೋಣೆಯೊಳಗೆ ತಂದು ನಿಲ್ಲಿಸಿದ. ಅಕ್ಷರ ಬಲ್ಲವರು ಸಹಿ ಮಾಡಿದರು, ಗೊತ್ತಿಲ್ಲದವರು ಹೆಬ್ಬೆಟ್ಟು ಒತ್ತಿದರು, ಅಷ್ಟೇ. ಆ ಗೋಳು ಇಳಿಯುವಷ್ಟೊತ್ತಿಗೆ ನಡುರಾತ್ರಿ ಕಳೆದಿತ್ತು, ಪ್ರವಾಹ ತಗ್ಗಿದಂತೆ.

* * *

ರಾಷ್ಟ್ರೀಯ ಪಕ್ಷವೊಂದರ ಚಿಹ್ನೆ ಮತ್ತು ಬಣ್ಣದಿಂದ ಆವೃತಗೊಂಡ ಸೀರೆಗಳನ್ನು ಹತ್ತಿ ಬಿಡಿಸುವ ಕೂಲಿಯಾಳುಗಳಿಗೆ ಉಡಲು ಕೊಟ್ಟು, ಎಲ್ಲರನ್ನೂ ತೋಟದಲ್ಲಿ ಹತ್ತಿ ಬಿಡಿಸುವಂತೆ ವೀರೇಂದ್ರ ಕುಲಕರ್ಣಿ ಹತ್ತಾರು ಬಗೆಯಲ್ಲಿ ಫೋಟೊ ತೆಗೆಸಿದ, ಎಲ್ಲರೂ ಅಪರೂಪದ ಖುಷಿ ಮತ್ತು ಉತ್ಸಾಹದಲ್ಲಿ ವಿಧವಿಧ ಭಂಗಿಗಳನ್ನು ಕ್ಯಾಮೆರಾಗೆ ನೀಡಿದರು. ರಾಜಕೀಯವಾಗಿ ಮುಂದೆ ಬರಲು ವೀರೇಂದ್ರ ಕುಲಕರ್ಣಿ, ಈ ಫೋಟೊವನ್ನು ಶಾಲಾಮಕ್ಕಳ ಪಠ್ಯಪುಸ್ತಕಗಳ ಮುಖಪುಟಗಳಲ್ಲಿ ತನ್ನ ಮತ್ತು ಸ್ಥಳೀಯ ಶಾಸಕನ ಫೋಟೊದೊಂದಿಗೆ ಮುದ್ರಿಸಿ ಅವರಿಗೆ ಉಚಿತವಾಗಿ ನೀಡುವ ಸಂಗತಿ ಭೀಮವ್ವಳಿಗೆ ಗೊತ್ತಾಗಿದ್ದು ಆರನೇ ತರಗತಿ ಓದುತ್ತಿದ್ದ ನೆರೆಯ ಶಿಳ್ಳೇಕ್ಯಾತರ ಹುಡುಗ ಈಶ್ವರ,

'ನೀ ಹೋದ ಮರುದಿನ
ಮೊದಲಂಗ ನಮ್ಮ ಬದುಕು
ಆಗ್ಯದೋ ಓ ಬಾಬಾಸಾಹೇಬ
ನಿನ್ನಂಗ ದುಡಿದವರು
ಕಳಕಳಿಯ ಪಡುವವರು
ಇನ್ನುತನ ಬರಲಿಲ್ಲ ಒಬ್ಬ.'

ಪದ್ಯವನ್ನು ಕಂಠಪಾಠ ಮಾಡುವಾಗ. ಅಲ್ಲಿ ತನ್ನ ಮುಖಕ್ಕಾಗಿ ಹುಡುಕಾಡಿ ಸುಸ್ತು ಹೊಡೆದಿದ್ದಳು. ನಡೆಯಲಾಗದಷ್ಟು ಕಿಬ್ಬೊಟ್ಟೆ ನೋವು, ಸೆಳೆತ. ಗುಡ್ಡಗಾಡು ಪ್ರಯಾಣ, ನಡುರಾತ್ರಿ ಮನೆ ಸೇರಿದಾಗ ಮಹಾಂತೇಶ, ಈ ಹಿಂದೆ ಮಾಡಿದ ಸಾಲದ ವಿಷಯವನ್ನು ಭೀಮವ್ವಳ ಮುಂದೆ ಪ್ರಸ್ತುತಪಡಿಸಿದ. ಉರಿಗಾಯದ ಮೇಲೆ ಖಾರ ಸವರಿದಂತೆ ಆಯಿತು. ಸಮಾಧಾನ, ಸಾಂತ್ವನದ ಹೃದಯಕ್ಕಾಗಿ ಹಂಬಲಿಸುತ್ತಿದ್ದವಳಿಗೆ ತಲೆ ಗಿರ್ರನ್ನತೊಡಗಿತು. ಫೋಟೊ ತೆಗೆಸಿಕೊಂಡ ಕೂಡಲೇ ಹತ್ತಿ ಕಟಾವು,